# ತೆರೆಯಾಚೆಗಿನ ಐಟಂ



**ಸಿನಿಮಾಗಳಲ್ಲಿನ ಅಶ್ಲೀಲತೆಯನ್ನು ವಿರೋಧಿಸುವ ಹುಚ್ಚ ವೆಂಕಟ್ ಅವರ ನಡವಳಿಕೆ ಹಾಗೂ ದಾಳಿಕೋರ ಮನಸ್ಥಿತಿಯಲ್ಲೇ ಅಶ್ಲೀಲತೆ ಇದೆ. ಸಂಸ್ಕೃತಿ ರಕ್ಷಣೆಯ ಹೆಸರಿನಲ್ಲಿನ ಅವರ ವರ್ತನೆಗಳು ನಿಜಜೀವನದ 'ಐಟಂ ಸಾಂಗ್'ಗಳಂತಿವೆ.**

'ನಿಮಗೆ ನಾಚಿಕೆ ಆಗಲ್ವಾ? ಒಂದು ಹೆಣ್ಣಾಗಿ ಸಿಗರೇಟ್–ಡ್ರಿಂಕ್ಸ್ ತಗೋತೀರಾ? ದುಡ್ಡಿಗಾಗಿ ಇದೆಲ್ಲ ಮಾಡಿದ್ರಾ?' ಇದು 'ನೀರ್ ದೋಸೆ' ಚಿತ್ರದ ನಾಯಕಿ ಹರಿಪ್ರಿಯಾ ಅವರ ಮುಂದೆ ಹುಚ್ಚ ವೆಂಕಟ್ ಇರಿಸಿರುವ ಪ್ರಶ್ನೆಪತ್ರಿಕೆ. ಹರಿಪ್ರಿಯಾ ಅವರು ಉತ್ತರಿಸುವ ಗೋಜಿಗೆ ಹೋಗಿಲ್ಲವಾದುದರಿಂದ ವೆಂಕಟ್ ಅವರ ಸಿಟ್ಟು ಮತ್ತೂ ಹೆಚ್ಚಾಗಿದೆ. 'ನೀರ್ ದೋಸೆ' ಚಿತ್ರದ ಟ್ರೇಲರ್ ನೋಡಿ, ಇಡೀ ಸಿನಿಮಾ ಅಶ್ಲೀಲವಾಗಿದೆ ಎಂದು ಷರಾ ಬರೆದಿರುವ ಅವರು, ತಮ್ಮ ಸಿಟ್ಟನ್ನು 'ಯುಟ್ಯೂಬ್'ನಲ್ಲೂ, ವಾಹಿನಿಗಳಲ್ಲೂ ಕಾರಿಕೊಂಡಿದ್ದಾರೆ.

ಸಿನಿಮಾದಲ್ಲಿ ಅಶ್ಲೀಲತೆಯ ಬಗ್ಗೆ ವೆಂಕಟ್ ಸಿಟ್ಟು ಮಾಡಿಕೊಂಡಿರುವುದು ಇದು ಮೊದಲಲ್ಲ. ತಮ್ಮನ್ನು ತಾವು ಸಂಸ್ಕೃತಿ ರಕ್ಷಕರೆಂದೂ ಹೆಣ್ಣುಮಕ್ಕಳು ಆ ಸಂಸ್ಕೃತಿಯ ಪ್ರತಿನಿಧಿಗಳೆಂದೂ ವೆಂಕಟ್ ತಮಗೆ ಸಿಕ್ಕ ಎಲ್ಲ ವೇದಿಕೆಗಳಲ್ಲೂ ಕಿರುಚುತ್ತಾ ಹೇಳಿಕೊಂಡು ಬಂದಿದ್ದಾರೆ. ಇದೇ ವೆಂಕಟ್, 'ಪರಪಂಚ' ಚಿತ್ರದಲ್ಲಿ 'ಹುಟ್ಟಿದ ಊರನು ಬಿಟ್ಟುಬಂದ ಮೇಲೆ' ಎನ್ನುವ ಗೀತೆಯನ್ನು ಹಾಡಿದ ನಂತರ ಸಿನಿಮಾದಲ್ಲಿನ ಅಶ್ಲೀಲತೆ ಬಗ್ಗೆ ತಕರಾರು ಎತ್ತಿದ್ದರು. ಆ ಚಿತ್ರದಲ್ಲಿನ ಹಾಡು–ಕುಣಿತಗಳನ್ನು ಉಗ್ರವಾಗಿ ಟೀಕಿಸಿದ್ದ ಅವರು, ಆ ದೃಶ್ಯಗಳನ್ನು ಕತ್ತರಿಸುವಂತೆ ಇಲ್ಲವೇ ತಮ್ಮ ಹಾಡನ್ನೇ ಕೈಬಿಡುವಂತೆ ಒತ್ತಾಯಿಸಿದ್ದರು. ಆದರೆ, ತೆರೆಮರೆಯಲ್ಲಿ ಅದೇನಾಯಿತೋ – ಯಾವುದೇ ಕಟ್‌ಗಳಿಲ್ಲದೆ 'ಪರಪಂಚ' ತೆರೆ ಕಂಡಿತು, ಚಿತ್ರಮಂದಿರಕ್ಕೆ ಬಂದಷ್ಟೇ ವೇಗವಾಗಿ ನಿರ್ಗಮಿಸಿದ್ದೂ ಆಯಿತು. ಈಗ 'ನೀರ್ ದೋಸೆ' ಸರದಿ.

ಸಿನಿಮಾಗಳಲ್ಲಿನ ಅಶ್ಲೀಲತೆ ಬಗ್ಗೆ ವಿರೋಧಿಸಲಿಕ್ಕೆ ವೆಂಕಟ್ ಅವರಿಗೆ ಎಲ್ಲ ಅಧಿಕಾರವೂ ಇದೆ. ಆದರೆ, ಅಶ್ಲೀಲತೆಗೆ ಅವರು ನೀಡುತ್ತಿರುವ ವ್ಯಾಖ್ಯೆ ಹಾಗೂ ವಿರೋಧವನ್ನು ವ್ಯಕ್ತಪಡಿಸುತ್ತಿರುವ ರೀತಿ ತಮಾಷೆಯಾಗಿದೆ. ದುಡ್ಡಿಗಾಗಿ ಇಂಥ ಪಾತ್ರಗಳಲ್ಲಿ ನಟಿಸುವುದಾದರೆ, 'ನೀರ್ ದೋಸೆ' ಚಿತ್ರದ ನಾಯಕಿಗೆ ತಾವು ಆಶ್ರಯ ಕೊಡುವುದಾಗಿ ಅವರು ಹೇಳಿದ್ದಾರೆ. ಈ ಔದಾರ್ಯವನ್ನು ಅವರು ಸಿನಿಮಾ ತೆರೆಯಾಚೆಗಿನ ಕತ್ತಲಕೂಪದ ಹೆಣ್ಣುಗಳ ಬಗ್ಗೆ ವ್ಯಕ್ತಪಡಿಸಿದ್ದರೆ ಅವರ ಇಮೇಜ್ ಮತ್ತಷ್ಟು ಹೆಚ್ಚುತ್ತಿತ್ತು.

ಸಿನಿಮಾದಲ್ಲಿ ನಾಯಕಿಯ ಪಾತ್ರ ಎಷ್ಟರಮಟ್ಟಿಗೆ ಅಶ್ಲೀಲವಾಗಿದೆ ಎನ್ನುವುದು ಬೇರೆಯ ಸಂಗತಿ. ಆದರೆ, ಆ ನೆಪದಲ್ಲಿ ಸಿನಿಮಾದ ನಾಯಕಿಯರ ಬಗ್ಗೆ ಲಘುವಾಗಿ ಮಾತನಾಡುವ ವೆಂಕಟ್‌ರ ಧೋರಣೆಯೇ ಹೆಚ್ಚು ಅಶ್ಲೀಲವಾಗಿದೆ. ಸದಾ ಅರೆನಿದ್ರೆಯಲ್ಲಿರುವಂತೆ ಕಾಣಿಸುವ ಕೆಂಪು ಕಣ್ಣುಗಳ ಅವರ ದಾಳಿಕೋರ ದೇಹಭಾಷೆಯಲ್ಲೂ ಅಶ್ಲೀಲತೆ ಇದೆ. ಸಂಸ್ಕೃತಿಯ ಬಗ್ಗೆ ಭಾವಾವೇಶದಿಂದ ಮಾತನಾಡುವ ಅವರು ತಮ್ಮ ನಟನೆಯ ಸಿನಿಮಾಗಳು ಪ್ರತಿನಿಧಿಸುವುದು ಯಾವ ಸಂಸ್ಕೃತಿಯನ್ನು ಎಂದು ಕೇಳಿಕೊಳ್ಳಬೇಕಾಗಿದೆ.

ಅಶ್ಲೀಲತೆ, ಹಾದರ ಎನ್ನುವುದು ಹೆಣ್ಣಿಗೆ ಮಾತ್ರ ಸಂಬಂಧಿಸಿದ್ದು ಎನ್ನುವ ಪುರುಷ ಅಹಂ–ವಿಕೃತಿಯ ಪ್ರತಿನಿಧಿಯಂತೆ ವೆಂಕಟ್ ತೋರುತ್ತಿದ್ದಾರೆ. ಸಂಸ್ಕೃತಿಯ ಬಗ್ಗೆ ನೀತಿಸಂಹಿತೆ ಹೇಳುವ ಅವರು ಪ್ರತಿಪಾದಿಸುತ್ತಿರುವ ಸಂಸ್ಕೃತಿಯಾದರೂ ಯಾವ ಬಗೆಯದು? ಹೆಸರಿನ ಜೊತೆಗೆ ತಳಕು ಹಾಕಿಕೊಂಡಿರುವ 'ಹುಚ್ಚ' ಸೂಚಿಸುವುದಾದರೂ ಏನನ್ನು? ಈ ನಿಟ್ಟಿನಲ್ಲಿ ವೆಂಕಟ್ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಇಲ್ಲದೇ ಹೋದಲ್ಲಿ, ಹೆಸರಿಗಿಂತಲೂ ಮಿಗಿಲಾಗಿ ಅದರ ಜೊತೆಗೆ ಸೇರಿಕೊಂಡಿರುವ ವಿಶೇಷಣವೇ ಹೆಚ್ಚು ನಿಜವೆನ್ನಿಸುತ್ತದೆ.

■ **ರಘು**